1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.92/2020

ದಿಃ 05.03.2021
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-4 Pw-4

ಹೆಸರು : ಪ್ರಕಾಶ್
ತಂದೆಯ ಹೆಸರು : ಮುತ್ತು
ವಯಸ್ಸು : 44 ವರ್ಷ
ಉದ್ಯೋಗ : ಚರ್ಚ್‌ನಲ್ಲಿ ಫಾಸ್ಟರ್
ವಾಸಸ್ಥಳ : ಚನ್ನಪಟ್ಟಣ

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.1ರಿಂದ 3, 5ರಿಂದ 9ರವರು ನನಗೆ ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿಗಳು ಮತ್ತು ಗೈರು ಹಾಜರಿರುವ ಆರೋಪಿ ನನಗೆ ಗೊತ್ತು. ದಿಃ25.02.2020ರಂದು ಸಂಜೆ 7.00 ಗಂಟೆ ಸಮಯದಲ್ಲಿ ಸಂತೆಮೊಗೇನಹಳ್ಳಿ ಗ್ರಾಮದಲ್ಲಿ ಚಾಸಾ.1ರವರು ಜಮೀನು ಖರೀದಿಸಿದ್ದು, ನಾನು, ಚಾಸಾ.1ರಿಂದ 3, 5ರಿಂದ 9ರವರು ಜಮೀನಿಗೆ ಆ ದಿನ ಸಂಜೆ 7 ಗಂಟೆಯವರೆಗೆ ಕಲ್ಲು ಹಾಕಿದ್ದು, ಕೆಲಸ ಮುಗಿಸಿ ಬರುತ್ತಿದ್ದಾಗ 3 ಜನ ಆರೋಪಿಗಳು ಏನು ಮಾಡುತ್ತಿದ್ದೀರಾ ಎಂದು ಕೇಳಿ, ಇಲ್ಲಿ ಏನೂ ಮಾಡಬಾರದು ಎಂದು, ನೀವು ಕ್ರಿಸ್ತನ ಜಾತಿಯವರು, ಸೂಳೆ ಜಾತಿಯವರು ಎಂದು 1ನೇ ಆರೋಪಿ ಚಾಸಾ.1ರವರಿಗೆ ಹೊಡೆಯಲು ಬಂದರು. ಆಗ ನಾನು

ಅವರ ರಕ್ಷಣೆಗೆ ಹೋದೆ, ಆಗ ಆರೋಪಿಗಳು ನನಗೆ ಬಲಭುಜದ ಮೇಲೆ ಹೊಡೆದರು. ನಂತರ ಚಾಸಾ.3 ನಮ್ಮ ರಕ್ಷಣೆಗೆ ಬಂದಿದ್ದು ಅವರನ್ನು ಸೂಳೆ ಜಾತಿಯವರು ಎಂದು ಕೆಟ್ಟದಾಗಿ ಬೈದು ತಳ್ಳಿದರು. ನಂತರ ಮತ್ತೆ ಇಲ್ಲಿ ಏನೂ ಮಾಡಬಾರದು, ಮಾಡಿದರೆ ಸಾಯಿಸುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿದರು. ನಂತರ ನಾವು ಎಲ್ಲರೂ ಮನೆಗೆ ಹೋದೆವು. ಚಾಸಾ.3, 5 ಮತ್ತು 6 ರವರು ಸಹ ಸಹಾಯಕ್ಕೆ ಬಂದಾಗ ಅವರನ್ನೂ ಕೆಟ್ಟದಾಗಿ ಬೈದು ತಳ್ಳಿರುತ್ತಾರೆ. ನಂತರ ರಾತ್ರಿ ಆರೋಪಿಗಳು ನಾವು ಹೂಣಿದ್ದ ಕಲ್ಲುಗಳನ್ನೆಲ್ಲ ಒಡೆದು ಹಾಕಿರುವುದು ತಿಳಿಯಿತು. ಅದರಿಂದ ನಮಗೆ ರೂ 1 ಲಕ್ಷದಷ್ಟು ನಷ್ಟ ಉಂಟಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

ಚಾಸಾ.2 ರವರಿಗೆ ಆರೋಪಿಗಳು ಹೊಲೆಯ ಜಾತಿಗೆ ಸೇರಿದವಳು ಎಂದು ಅವಾಚ್ಯ ಶಬ್ದದಿಂದ ನಿಂದಿಸಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲುಃ ಶ್ರೀ. ಬಿ.ಸಿ.ವಿ., ವಕೀಲರಿಂದ ಆರೋಪಿಗಳ ಪರವಾಗಿಃ</u>

ನಾನು ಮೂಲವಾಗಿ ತಮಿಳುನಾಡಿನ ಮಧುರೈ ನಿವಾಸಿ. ಚಾಸಾ.1 ರವರು ತಮಿಳುನಾಡಿನವರು ಎಂದರೆ ಸರಿ. ಚನ್ನಪಟ್ಟಣದ ಕಾರ್ಮೆಲ್ ಚರ್ಚ್ ನಲ್ಲಿ ಫಾದರ್ ಆಗಿ ಕೆಸಲ ಮಾಡುತ್ತಿದ್ದೇನೆ. ಚಾಸಾ.1 ರಿಂದ

3, 5 ರಿಂದ 9 ರವರುಗಳು ನಮ್ಮ ಚರ್ಚ್ ಗೆ ಬಂದು ಹೋಗುವುದು ಮಾಡುತ್ತಿದ್ದರು ಎನ್ನುವುದು ಸರಿ. ಅವರೆಲ್ಲಾರೂ ಯೇಸುಕ್ರಿಸ್ತನ ಆರಾಧಕರು ಎನ್ನುವುದು ಸರಿ. ಸಾಕ್ಷಿದಾರರು ಯಾವ ರೀತಿಯಲ್ಲಿ ಕ್ರೈಸ್ತ ಧರ್ಮಕ್ಕೆ ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಗಾರೆ ಕೆಲಸ, ಕೂಲಿ ಕೆಲಸ ಮತ್ತು ಕಲ್ಲಿನ ಕೆಲಸವನ್ನು ಚನ್ನಪಟ್ಟಣದಲ್ಲಿ ಮಾಡಿ ಅಭ್ಯಾಸ ಇಲ್ಲ.

2. ಚಾಸಾ.1 ಚರ್ಚ್ ನ್ನು ಕಟ್ಟುವ ಉದ್ದೇಶದಿಂದ ಜಮೀನು ಖರೀದಿಸಿದ್ದರು ಎನ್ನುವುದು ಸರಿಯಲ್ಲ. ದಿಃ23.02.2020 ರಂದು ಸಂಜೆ 7.00 ಗಂಟೆಗೆ ಘಟನಾ ಸ್ಥಳಕ್ಕೆ ಹೋಗಿದ್ದೆವು ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ನಾವು ಮದ್ಯಪಾನ ಮಾಡುವುದು, ಡ್ಯಾನ್ಸ್ ಮಾಡುವುದು ಮಾಡುತ್ತಿದ್ದೆವು ಎನ್ನುವುದು ಸರಿಯಲ್ಲ. ನಮ್ಮ ವರ್ತನೆಯನ್ನು ಅಕ್ಕಪಕ್ಕದ ಹಳ್ಳಿಯ ಗ್ರಾಮಸ್ಥರು ಖಂಡಿಸಿ ತಕರಾರು ಮಾಡಿದ್ದರು ಎನ್ನುವುದು ಸರಿಯಲ್ಲ. ಅದರಿಂದ ನಾವು ಅವರಿಗೆ ನಮಗೆ ತಕರಾರು ಮಾಡಿದರೆ ಅವರಿಗೆ ಕೊಲೆ ಮಾಡುತ್ತೇವೆಂದು ಬೆದರಿಕೆ ಹಾಕಿರುತ್ತೇವೆ ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ 1 ನೇ ಆರೋಪಿ ಗ್ರಾಮ ಪಂಚಾಯ್ತಿ ಸದಸ್ಯನಿದ್ದು ಸ್ಥಳಕ್ಕೆ ಬಂದು ಈ ರೀತಿ ಕೃತ್ಯ ಎಸಗಬಾರದೆಂದು ಹೇಳಿದ್ದರು ಎನ್ನುವುದು ಸರಿಯಲ್ಲ. ದಿಃ27.02.2020 ರಂದು ಅದರಿಂದ ನಾನು, ಚಾಸಾ.1 ಮತ್ತು

ಸಾಕ್ಷಿದಾರರು ಎಲ್ಲರೂ ಸೇರಿ ಒಳಸಂಚು ಮಾಡಿ ಆರೋಪಿಗಳ ವಿರುದ್ದ ದೂರು ನೀಡಿರುತ್ತೇವೆ ಎನ್ನುವುದು ಸರಿಯಲ್ಲ.

3. ಘಟನೆಗೆ ಮುನ್ನ ನಮಗೆ ಆರೋಪಿತರು ಮತ್ತು ಆರೋಪಿತರಿಗೆ ನಾವು ಪರಿಚಯ ಇರಲಿಲ್ಲ ಎನ್ನುವುದು ಸರಿ. ನಾನು ಕೋಡಂಬಳ್ಳಿಯಲ್ಲಿ ನನಗೆ ಉಂಟಾದ ಗಾಯಕ್ಕೆ ಚಿಕಿತ್ಸೆ ಪಡೆದಿರುತ್ತೇನೆ. ಯಾವುದೇ ವೈದ್ಯಕೀಯ ಚೀಟಿಯನ್ನು ಪೊಲೀಸರಿಗೆ ನೀಡಿಲ್ಲ.

4. ನಾನು ದಿಃ26.02.2020 ರಂದೇ ಘಟನೆಯ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಅದನ್ನು ಪಿಎಸ್ಐರವರು ದಾಖಲಿಸಿರುತ್ತಾರೆ. ಪ್ರಶ್ನಿತ ಘಟನೆಯ ಸಮಯದಲ್ಲಿ ನಾವು ಕಲ್ಲು ಹಾಣಿ ಬರುತ್ತಿದ್ದಾಗ ಆರೋಪಿಗಳು ನಮಗೆ ಅವಾಚ್ಯ ಶಬ್ದದಿಂದ ಜಾತಿ ಹಿಡಿದು ನಿಂದಿಸಿ ನನಗೆ, ಚಾಸಾ.1 ರಿಂದ 3 ರವರಿಗೆ ಹಲ್ಲೆ ಮಾಡಿ ಪ್ರಾಣ ಬೆದರಿಕೆ ಹಾಕಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಪ್ರಶ್ನಿತ ಘಟನಾ ಸ್ಥಳಕ್ಕೆ ಹೋಗಿರಲಿಲ್ಲ ಎನ್ನುವುದು ಸರಿಯಲ್ಲ. ಆರೋಪಿಗಳು ಕಲ್ಲು ಮುರಿದಿದ್ದನ್ನು ನಾನು ಕಣ್ಣಿಂದ ನೋಡಿಲ್ಲ ಎನ್ನುವುದು ಸರಿ. ನಾನು, ಚಾಸಾ.1 ರಿಂದ 3 ಸಾರ್ವಜನಿಕರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಿಸಲು ಯತ್ನಿಸಿದ್ದು ಅದನ್ನು ಆರೋಪಿಗಳು ವಿರೋಧಿಸಿದ್ದರೆಂದರೆ ಸರಿಯಲ್ಲ. ಆರೋಪಿಗಳು ನಮ್ಮ ಮತಾಂತರಕ್ಕೆ ಅಡ್ಡಿಪಡಿಸಿದರೆಂಬ ಕಾರಣಕ್ಕೆ ಅವರುಗಳ ಮೇಲೆ

ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳ ಸಿದ್ಧಾರಾಧ್ಯ ಹೆಚ್.ಜೆ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.